OS No. 89/2017 PW-1

<u>ದಿನಾಂಕ **25.09.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ **10** ನೇ ಪ್ರತಿವಾದಿ ಪರ ಶ್ರೀ ಎಸ್ ಎಂ ವಕೀಲರಿಂದಃ</u>

ಭಾಗ ಕೋರಿ ದಾವಾ ಹಾಕಿದ್ದೇನೆ. ದಾವಾ ಆಸ್ತಿಗೆ ನನ್ನ ತಂದೆ ಮಾಲೀಕ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ನನ್ನ ತಂದೆಗೆ ನಾನು ಒಬ್ಬಳೇ ಹೆಣ್ಣು ಮಗಳು ಮತ್ತು ನನ್ನ ಅಣ್ಣ. 1 ನೇ ಪ್ರತಿವಾದಿಯವರು ದಾಖಲೆಗಳನ್ನು ಒಳಗೊಳಗೆ ಮಾಡಿಕೊಂಡಿರುತ್ತಾರೆ. ನನ್ನ ತಂದೆಯು 1 ರಿಂದ 5 ನೇ ಪ್ರತಿವಾದಿಯವರಿಗೆ ದಾವಾ ಆಸ್ತಿಯ ಸ್ವಾದೀನವನ್ನು ಕೊಟ್ಟಿರುತ್ತಾರೆಂದರೆ ಸುಳ್ಳು. ನನ್ನ ಅಣ್ಣ ಜಾಸ್ತಿಗಳ ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ಅಣ್ಣ ನನ್ನ ತಂದೆಗಿಂತ ಮೊದಲು ತೀರಿಕೊಂಡಿರುತ್ತಾರೆ. ನನ್ನ ಅಣ್ಣ ತೀರಿಕೊಂಡ ನಂತರ ನನ್ನ ತಂದೆಯು ಪ್ರತಿವಾದಿ 1 ರವರಿಗೆ ಖಾತಾ ಮತ್ತು ರೆವೆನ್ಯೂ ದಾಖಲೆಗಳನ್ನು ಮಾಡಿಕೊಟ್ಟಿರುತ್ತಾರೆಂದರೆ ಸುಳ್ಳು. ಎಂ ಆರ್ ಸಂಖ್ಯೆ 23/1992-93 ರಲ್ಲಿಯೇ 1 ನೇ ಪ್ರತಿವಾದಿಗೆ ಖಾತಾ ಆಗಿದೆ ಎಂದರೆ ಸುಳ್ಳು. ಪೋಡಿಯಾದ ನಂತರ 1 ನೇ ಪ್ರತಿವಾದಿಗೆ ಹೊಸ ನಂಬರ್ ಬಂದಿದೆ ಎಂದರೆ ಸುಳ್ಳು. ನಿಪಿ-7 ರಂತೆ 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸುಳ್ಳು. ಆದ್ದರಿಂದ 1 ರಿಂದ 5 ನೇ ಪ್ರತಿವಾದಿಯವರು ದಾವಾ ಆಸ್ತಿ ಗಳನ್ನು 6 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿದ್ದಾರೆಂದರೆ ಸುಳ್ಳು. 6 ರಿಂದ 8 ನೇ ಪ್ರತಿವಾದಿಯವರಿಗೆ ಹಕ್ಕು ಬಂದ ನಂತರ ದಾವಾ ಆಸ್ತಿಯನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದರೆ ಸುಳ್ಳು. ಈಗ ಸದರಿ ದಾವಾ ಸ್ವತ್ತಿನ ದಾಖಲೆಗಳು 6 ನೇ ಪ್ರತಿವಾದಿಯವರ ಹೆಸರಿನಲ್ಲಿವೆ. ಈ ದಾಖಲೆಗಳ ವಿರುದ್ಧ ತಕರಾರು ಸಲ್ಲಿಸಿದ ಬಗ್ಗೆ ತಕರಾರು ಸಲ್ಲಿಸಿದ ದಾಖಲೆಗಳನ್ನು ವಕೀಲರಿಗೆ ನೀಡಿರುತ್ತೇನೆ. ನನಗೆ ಭಾಗ ಬರುವುದಿಲ್ಲ ಎಂದರೆ ಸುಳ್ಳು. ವಾದಿ ಮತ್ತು ಪ್ರತಿವಾದಿಯವರು ಒಂದೇ ಕುಟುಂಬದವರು ಆದರೆ ನನ್ನ ತಂದೆ ಇರಲಿಲ್ಲ. ವಂಶವೃಕ್ಷವನ್ನು

ಹಾಜರುಪಡಿಸಿರುತ್ತೇನೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. 10 ನೇ ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ನಿಜ. ನನಗೆ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲದೇ ಇದ್ದರೂ ಹಣ ಪಡೆಯುವ ದುರಾಸೆಯಿಂದ ಸುಳ್ಳು ದಾವಾ ಹಾಕಿರುತ್ತೇನೆಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.